**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1700/2022**

| | | | |
|---|---|---|---|
| **ಹೆಸರು** | **:** | **ನವೀನ** | **ದೋ.ಸಾ. 2** |
| **ತಂದೆಯ ಹೆಸರು** | **:** | **ರಾಮುಲು** | **ಪ್ರಾ.ಸಾ. 2** |
| **ವಯಸ್ಸು** | **:** | **20 ವರ್ಷ** | **ದಿನಾಂಕಃ 05-09-2023** |
| **ಉದ್ಯೋಗ** | **:** | **ಚಹಾ ಅಂಗಡಿ** | |
| **ವಾಸಸ್ಥಳ** | **:** | **ಸೋಮಲಿಂಗದಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-3 ನನಗೆ ಗೊತ್ತಿಲ್ಲ. ಚಾಸಾ-1, 4 ಮತ್ತು 5 ಅಬಕಾರಿ ಅಧಿಕಾರಿಗಳು ಗೊತ್ತು.

ಈಗ ನನಗೆ ತೋರಿಸಲಾದ ಮೂರು ದಾಖಲೆಗಳಲ್ಲಿರುವ ಸಹಿಗಳು ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಗಳು ಶೋಧನಾ ಸಮುಚಿತ, ಪಂಚನಾಮೆ ಮತ್ತು ಮಾದರಿ ಸೀಲು ಪತ್ರ ಆಗಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿಯ ಗುರುತಿಸಿದ ಸಹಿಗಳನ್ನು ಕ್ರಮವಾಗಿ ನಿಪಿ-3(ಎ), 4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು.

ಈಗ್ಗೆ ಒಂದೂವರೆ ವರ್ಷಗಳ ಹಿಂದೆ ಸುಲೇಪೇಟ್ ಬಸ್ ನಿಲ್ದಾಣದ ಬಳಿ ಇರುವ ಚಹಾ ಅಂಗಡಿಯಲ್ಲಿ ಸಂಜೆ ಸುಮಾರು 07-00 ಗಂಟೆಗೆ ನಾನು ಚಹಾ ಕುಡಿಯುತ್ತಿದ್ದಾಗ ಅಲ್ಲಿಗೆ ಬಂದ ಅಬಕಾರಿ ಪೋಲೀಸರು ನಿಪಿ-3 ರಿಂದ 5 ರ ದಾಖಲೆಯ ಮೇಲೆ ನನ್ನ ಸಹಿ ಪಡೆದರು.

ನಿಪಿ-3 ರಿಂದ 5 ರ ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿಲ್ಲ.

ಈ ಪ್ರಕರಣದ ಇಬ್ಬರು ಆರೋಪಿತರನ್ನು ನಾನು ಎಲ್ಲೂ ನೋಡಿಲ್ಲ. ಪೋಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಹಲಕೋಡಾ ಕ್ರಾಸ್ ಬಳಿ ಕರೆದುಕೊಂಡು ಹೋಗಿಲ್ಲ. ಪೋಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ, ಪಂಚನಾಮೆ ಜರುಗಿಸಿಲ್ಲ ಮತ್ತು

ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಮಾಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರರು ನಡೆಸಿರುವ ಪಂಚನಾಮೆಗೆ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 12-07-2022 ರಂದು ರಾತ್ರಿ 09-30 ಗಂಟೆ ಸುಮಾರಿಗೆ ಚಿಂಚೋಳಿ ಅಬಕಾರಿ ಅಧಿಕಾರಿಗಳು ಸುಲೇಪೇಟೆ ಗ್ರಾಮದ ಬಸವೇಶ್ವರ ಸರ್ಕಲ್ ಬಳಿ ನನ್ನನ್ನು ಮತ್ತು ಚಾಸಾ-3 ರವರನ್ನು ಕರೆಸಿಕೊಂಡು ಅವರ ವಾಹನದಲ್ಲಿ ನಮ್ಮನ್ನು ಹಲಕೋಡಾ ಕ್ರಾಸ್ ಬಳಿ ರಾತ್ರಿ 10-20 ರ ಸುಮಾರಿಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಸದರಿಯವರು ನಿಪಿ-3 ರ ಶೋಧನಾ ಸಮುಚಿತವನ್ನು ತಯಾರಿಸಿಕೊಂಡು ಹಲಕೋಡಾ ರಸ್ತೆಯಲ್ಲಿ ಕೆಎ-32 ಇಎನ್-6084 ರ ತಡೆದು ನಿಲ್ಲಿಸಿ ತಪಾಸಣೆ ಮಾಡಿದಾಗ ಅದರಲ್ಲಿ 40 ಲೀಟರ ಸೇಂದಿ ಸಾಗಾಟ ಆಗುತ್ತಿತ್ತು ಮತ್ತು ಸದರಿ ಸೇಂದಿಯನ್ನು ಪೊಲೀಸರು ರಾತ್ರಿ 10-30 ರಿಂದ 11-30 ಗಂಟೆಯವರೆಗೆ ನಮ್ಮ ಸಮಕ್ಷಮ ಜಪ್ತು ಮಾಡಿ ನಿಪಿ-4 ರ ಪಂಚನಾಮೆಯನ್ನು ಬರೆದು ನಿಪಿ-5 ರ ಮಾದರಿ ಸೀಲು ಪತ್ರ ತಯಾರಿಸಿದರು ಎನ್ನುವುದು ಸರಿಯಲ್ಲ.

ನಿಶಾನೆ ಪಿ-3 ರಿಂದ 5 ರ ದಾಖಲೆಗಳ ಮೇಲೆ ಪೊಲೀಸರು ನನ್ನ ಸಹಿಯನ್ನು ಹಲಕೊಡಾ ಕ್ರಾಸ್ ಬಳಿಯೇ ಪಡೆದಿದ್ದರು ಎನ್ನುವುದು ಸರಿಯಲ್ಲ.

ನಿಪಿ-4 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಎನ್ನುವುದು ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ನಿಪಿ-4 ರ ಪಂಚನಾಮೆಯನ್ನು ಜರುಗಿಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎ.ಎಸ್.ಹೆಚ್. ವಕೀಲರಿಂದಃ ಇಲ್ಲಾ .**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**